I/482315/2023

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ
ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003

**ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18**
**ದಿನಾಂಕ: 17.01.2018ರಂತೆ ಸ್ಪೋರ್ಟ್ಸ್ ಕೋಟಾದಡಿ**
**10 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ ನೇರ ನೇಮಕಾತಿ**

# ಪ್ರಕಟಣೆ

ಈ ಕಛೇರಿ ಪ್ರಕಟಣೆ ದಿನಾಂಕ: 31.07.2023ನ್ನು ಮುಂದುವರೆಸುತ್ತಾ, ಈ ಕಛೇರಿ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18 ದಿನಾಂಕ:17.01.2018ರ ಕಂಡಿಕೆ 2.F(i) ರನ್ವಯ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆ, ಹಾಗೂ ದೇಹ ದಾರ್ಢ್ಯತೆ ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆ – Aptitude Test (Objective Type)]ಯನ್ನು ದಿನಾಂಕ: 23.07.2023ರಂದು ಅರಣ್ಯ ಭವನ, 8ನೇ ಮಹಡಿ, ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರು – 560003 ಇಲ್ಲಿ ನಡೆಸಲಾಗಿರುತ್ತದೆ.

ಅದರನ್ವಯ, ದಿನಾಂಕ: 23.07.2023ರಂದು ನಡೆಸಲಾದ ಲಿಖಿತ ಪರೀಕ್ಷೆ – Aptitude Test (Objective Type)]ಗೆ ಸಂಬಂಧಿಸಿದಂತೆ, ಕೀ-ಉತ್ತರಗಳನ್ನು ದಿನಾಂಕ:31.07.2023ರ ಪ್ರಕಟಣೆಯೊಂದಿಗೆ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದ್ದು, ಕೀ-ಉತ್ತರಗಳ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಮಾತ್ರ ನಿಗದಿತ ನಮೂನೆಯಲ್ಲಿ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಈ ಕಛೇರಿಯ ಇ-ಮೇಲ್ **"pccfrecruitment@gmail.com" ಗೆ ದಿನಾಂಕ: 07.08.2023ರೊಳಗೆ** ಸಲ್ಲಿಸಲು ತಿಳಿಸಲಾಗಿರುತ್ತದೆ. ಈ ಅವಧಿಯಲ್ಲಿ ಕೀ ಉತ್ತರಗಳ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

ಆದುದರಿಂದ, ಅರಣ್ಯ ಇಲಾಖೆಯ ನೇರ ನೇಮಕಾತಿ (ಸ್ಪೋರ್ಟ್ಸ್ ಕೋಟಾ) ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18 ದಿನಾಂಕ:17.01.2018ಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು OA No. 6598/2018ರಲ್ಲಿನ ಆದೇಶ ದಿನಾಂಕ:24.04.2019ರ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು WP No. 6265/2021 (S-KSAT) C/W WP No. 10785/2020 (S-KSAT)ರಲ್ಲಿನ ಅಂತಿಮ ಆದೇಶ ದಿನಾಂಕ: 07.07.2021ರಂತೆ ಕ್ರಮ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಅಪಜೀ 49 ಅಅಸೇ 2021 ದಿನಾಂಕ:22.08.2022ರ ಅನುಮತಿಯಂತೆ ಸ್ಪೋರ್ಟ್ಸ್ ಕೋಟಾದಡಿ 10 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ 1:1 (ಹುದ್ದೆ:ಅಭ್ಯರ್ಥಿ) ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

## ಅಂತಿಮ ಆಯ್ಕೆ ಪಟ್ಟಿ

| Sl.No. | Appln ID | Regn ID | Full Name of the Applicant | Date of Birth | Gender | Written Exam Marks | Selected Category |
|---|---|---|---|---|---|---|---|
| 1 | 7000795 | 1004174 | SHASHANK J RAI | 19-03-1993 | MALE | 38 | General Merit |

*[**ಸೂಚನೆ:** ಅಭ್ಯರ್ಥಿ ಸಲ್ಲಿಸಿರುವ ಮಾಹಿತಿ/ದಾಖಲೆ/ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಪ್ರಾಧಿಕಾರಿಗಳಿಂದ ನೈಜತೆಯ ದೃಢೀಕರಣದ ಷರತ್ತಿಗೆ ಒಳಪಟ್ಟಿರುತ್ತದೆ. ಅಲ್ಲದೆ, ಯಾವುದೇ ಹಂತದಲ್ಲಿ ಅಭ್ಯರ್ಥಿಯ ಅನರ್ಹತೆ ಖಚಿತವಾದಲ್ಲಿ, ಅಭ್ಯರ್ಥಿಯ ಆಯ್ಕೆಯನ್ನು ರದ್ದುಪಡಿಸುವ ಅಧಿಕಾರವನ್ನು ಅರಣ್ಯ ಇಲಾಖೆಯು ಹೊಂದಿರುತ್ತದೆ.]*

**Signed by Rajiv Ranjan, Ifs**
**Date: 08-09-2023 19:32:03**

ದಿನಾಂಕ: 08.09.2023

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಹಾಗೂ
**ಅಧ್ಯಕ್ಷರು, ವಿಶೇಷ ನೇಮಕಾತಿ ಸಮಿತಿ**